**40ನೇ ಪದವಿ ಪ್ರದಾನ ಸಮಾರಂಭ**

# Graduation Day

*and Felicitation to Rank Holders, Gold Medalists and Toppers*

**ಶನಿವಾರ, 10ನೇ ಜೂನ್ 2023**
**Saturday, 10th June 2023**

**Programme:**

| | |
|---|---|
| 10.45 am – 11.00 am | : Photo Session |
| 11.00 am – 11.15 am | : Procession |
| 11.15 am – 11.30 am | : Dignitaries on the Dias |
| 11.30 am – 11.40 am | : Naada Geethe |
| 11.40 am – 11.45 am | : Welcome Address |
| 11.45 am – 11.50 am | : Lighting the lamp |
| 11.50 am – 12.10 pm | : Address by Chief Guest. |
| 12.10 pm – 12.30 pm | : Certificate and Award presentation to the Graduates |
| 12.30 pm – 12.40 pm | : Presidential Remarks |
| 12.40 pm – 12.45 pm | : Administration of Oath |
| 12.45 pm – 12.50 pm | : Declaration of Graduation |
| 12.50 pm – 12.55 pm | : National Anthem |
| 12.55 pm – 01.00 pm | : Procession leaves the auditorium |

**Protocol :**

1. All the invitees shall occupy their seats by 10.00 am
2. The assembly will remain standing when the procession enters the venue and will remain so until dignitaries take their seats.
3. When the ceremony is over, the assembly will remain standing until the procession leaves the venue.
4. They shall not move around or leave the venue during the Program.
5. Mobile phones should be switched off during the event.

Kindly co-operate and abide by the same.

**Bapuji Educational Association (R.)**
**Bapuji Institute of Engineering and Technology**
**Davanagere-577 004,** Karnataka

**Management, Principal, Director, Staff and Students of BIET**

*Cordially invite You to*

# 40th Graduation Day

*and*

*Felicitation to Rank Holders,*
*Gold Medalists and Toppers*




*All are cordially invited*

ಬಾಪೂಜಿ ವಿದ್ಯಾ ಸಂಸ್ಥೆ (ರಿ)

**ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ**

ದಾವಣಗೆರೆ–577004, ಕರ್ನಾಟಕ

ಇಂಜಿನಿಯರಿಂಗ್ ಪದವೀಧರರಿಗಾಗಿ

**ಶನಿವಾರ 10 ನೇ ಜೂನ್ 2023 ರಂದು ಬೆಳಿಗ್ಗೆ 10.30 ರಿಂದ**

ಬಿ.ಐ.ಇ.ಟಿ. ಕಾಲೇಜಿನ

**ಎಸ್.ಎಸ್. ಮಲ್ಲಿಕಾರ್ಜುನ ಸಾಂಸ್ಕೃತಿಕ ಕೇಂದ್ರದಲ್ಲಿ ಏರ್ಪಡಿಸಿರುವ**

# 40ನೇ ಪದವಿ ಪ್ರಧಾನ ಸಮಾರಂಭ ಮತ್ತು

ರ್‍ಯಾಂಕ್ ವಿಜೇತರು, ಬಂಗಾರ ಪದಕ ವಿಜೇತರು ಹಾಗೂ
ಪ್ರಥಮ ಸ್ಥಾನ ಪಡೆದವರಿಗೆ ಸನ್ಮಾನ ಸಮಾರಂಭಕ್ಕೆ
ತಮ್ಮನ್ನು ತುಂಬು ಹೃದಯದಿಂದ ಆಹ್ವಾನಿಸುತ್ತಿದ್ದೇವೆ.

ಮುಖ್ಯ ಅತಿಥಿಗಳು :

**ಶ್ರೀ ಯತೀಶ್ ಚಂದ್ರ ಜಿ.ಹೆಚ್.,** ಭಾ.ಪೊ.ಸೇ
ಡಿ.ಸಿ.ಪಿ., ಸಿ.ಸಿ.ಬಿ., ಬೆಂಗಳೂರು

**ಡಾ|| ಶಿವಶಂಕರ್ ಕೆ**
ಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾಲಯ, ದಾವಣಗೆರೆ

ಅಧ್ಯಕ್ಷತೆ :

**ಡಾ. ಶಾಮನೂರು ಶಿವಶಂಕರಪ್ಪ,** ಅಧ್ಯಕ್ಷರು, ಬಿ.ಐ.ಇ.ಟಿ.
ಗೌರವ ಕಾರ್ಯದರ್ಶಿಗಳು, ಬಾಪೂಜಿ ವಿದ್ಯಾ ಸಂಸ್ಥೆ (ರಿ)
ಶಾಸಕರು, ದಾವಣಗೆರೆ (ದಕ್ಷಿಣ), ಮಾಜಿ ಸಚಿವರು, ಕರ್ನಾಟಕ ಸರ್ಕಾರ

ಇವರ ಉಪಸ್ಥಿತಿಯಲ್ಲಿ

**ಪ್ರೊ. ವೈ. ವೃಷಭೇಂದ್ರಪ್ಪ**
ನಿರ್ದೇಶಕರು, ಬಿ.ಐ.ಇ.ಟಿ.

**ಡಾ. ಹೆಚ್.ಬಿ. ಅರವಿಂದ**
ಪ್ರಾಂಶುಪಾಲರು, ಬಿ.ಐ.ಇ.ಟಿ.

ಡೀನ್ಸ್, ವಿಭಾಗದ ಮುಖ್ಯಸ್ಥರುಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗ
ಹಾಗೂ ವಿದ್ಯಾರ್ಥಿ–ವಿದ್ಯಾರ್ಥಿನಿಯರು, ಬಿ.ಐ.ಇ.ಟಿ.

**Bapuji Educational Association (R.)**

**Bapuji Institute of Engineering and Technology**

Davangere-577004, Karnataka

*With immense pleasure and honour*
*We Cordially invite you to the*

# 40th Graduation Day and

*Felicitation to Rank Holders, Gold Medalists and Toppers*
*On Saturday, 10th June 2023, 10.30 am onwards*
*at S S Mallikarjun Cultural Centre, BIET Campus*

**Chief Guests :**

**Sri Yathish Chandra G H,** IPS
DCP, CCB, Bangalore

**Dr. Shivashankar K**
Registrar (Evaluation), Davanagere University, Davanagere

**President :**

**Dr. Shamanuru Shivashankarappa,** Chairman, BIET
Hon. Secretary, Bapuji Educational Association (R.)
MLA, Davangere South, Former Minister, Govt. of Karnataka

**In the presence of**

**Prof. Y. Vrushabhendrappa**
Director, BIET

**Dr. H. B. Aravind**
Principal, BIET

Deans, HODs, Teaching and Non-Teaching staff
and Students of BIET

# ಸಾಧಕರಲ್ಲಿ ಶೇ.40 ರಷ್ಟು ಇಂಜಿನಿಯರ್‌ಗಳು

Janatahavani 11-06-2023

## ಬಿಐಇಟಿಯಲ್ಲಿ ನಡೆದ ಪದವಿ ದಿನಾಚರಣೆಯಲ್ಲಿ ಡಿಸಿಪಿ ಯತೀಶ್ ಚಂದ್ರ



ದಾವಣಗೆರೆ ಜೂ. 10 - ದೊಡ್ಡ ಸಾಧನೆ ಮಾಡುತ್ತಿರುವವರಲ್ಲಿ ಇಂಜಿನಿಯರ್‌ಗಳ ಪಾಲು ಶೇ.40ರಷ್ಟಿದೆ. ನಾಗರಿಕ ಸೇವೆಗಳೂ ಸೇರಿದಂತೆ, ಎಲ್ಲ ವಲಯಗಳಲ್ಲಿ ಇಂಜಿನಿಯರ್ ಹಿನ್ನೆಲೆಯ ಸಾಧಕರಿದ್ದಾರೆ ಎಂದು ಬೆಂಗಳೂರಿನ ನಗರ ಪೊಲೀಸ್ ಅಪರಾಧ ವಿಭಾಗದ ಡಿ.ಸಿ.ಪಿ. ಜಿ.ಹೆಚ್. ಯತೀಶ್ ಚಂದ್ರ ತಿಳಿಸಿದರು.

ನಗರದ ಬಿಐಇಟಿ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ 40ನೇ ಪದವಿ ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಸಮಸ್ಯೆ ಬಗೆಹರಿಸುವುದನ್ನು ಕಲಿಸಲಾಗುತ್ತದೆ. ಸಮಸ್ಯೆ ಬಗೆಹರಿಸುವ ಕಲೆ ಎಲ್ಲ ವಲಯಗಳಲ್ಲಿ ಉಪಯೋಗಕ್ಕೆ ಬರುತ್ತದೆ ಎಂದು ಹೇಳಿದರು.

ಯಶಸ್ಸು ಗಳಿಸಬೇಕಾದರೆ ಚಿಕ್ಕ ವಯಸ್ಸಿನಲ್ಲೇ ಉದ್ಯಮಶೀಲತೆಯ ಗುಣ ಬೆಳೆಸಿಕೊಳ್ಳಬೇಕು. ಉದ್ಯೋಗಿಯಾಗುವ ಮನೋಭಾವ ಬಿಟ್ಟು, ಉದ್ಯಮ ಆರಂಭಿಸುವ ಸ್ಫೂರ್ತಿ ಹೊಂದಬೇಕು ಎಂದು ಕಿವಿಮಾತು ಹೇಳಿದರು.

ಕೆಲ ಯುವ ಇಂಜಿನಿಯರ್‌ಗಳಲ್ಲಿ ಉತ್ತಮ ಯೋಜನೆಗಳಿರುತ್ತವೆ. ತಾವೇ ಕೈಗಾರಿಕೆ ಆರಂಭಿಸಿ ಯೋಜನೆಗಳನ್ನು ತಾವೇ ಕಾರ್ಯಗತಗೊಳಿಸಿದಲ್ಲಿ ಉತ್ತಮ ಆದಾಯ (3ನೇ ಪುಟಕ್ಕೆ)

### ಯಶಸ್ಸಿನ ಪಂಚ ಸೂತ್ರಗಳು

ಮಾನಸಿಕ ಹಾಗೂ ದೈಹಿಕ ಆರೋಗ್ಯದ ಕಡೆ ಹೆಚ್ಚಿನ ಕಾಳಜಿ, ಕುಟುಂಬದಲ್ಲಿ ಉತ್ತಮ ಸಂಬಂಧ, ಜೀವನದಲ್ಲಿ ಹೆಚ್ಚು ಸ್ವಾತಂತ್ರ್ಯ ನೀಡುವಷ್ಟು ಆದಾಯ, ಉತ್ತಮ ಸ್ನೇಹಿತರು ಹಾಗೂ ಹವ್ಯಾಸಗಳು ಜೀವನದಲ್ಲಿ ಯಶಸ್ಸು ತರುತ್ತವೆ ಎಂದು ಜಿ.ಹೆಚ್. ಯತೀಶ್ ಚಂದ್ರ ಹೇಳಿದರು. ಯಶಸ್ಸು ಎಂಬುದನ್ನು ಒಬ್ಬೊಬ್ಬರು ಒಂದೊಂದು ರೀತಿ ವ್ಯಾಖ್ಯಾನಿಸುತ್ತಾರೆ. ವಯಸ್ಸು ಕಳೆದಂತೆ ಯಶಸ್ಸಿನ ಗುರಿಗಳೂ ಬೇರೆಯಾಗುತ್ತವೆ. ಆದರೆ, ಯಶಸ್ಸಿನ ಕಡೆ ನಿರಂತರ ಪರಿಶ್ರಮದಿಂದ ಜೀವನದಲ್ಲಿ ಮುನ್ನಡೆ ಸಾಧ್ಯ ಎಂದವರು ತಿಳಿಸಿದರು.

# ಸಾಧಕರಲ್ಲಿ ಶೇ.40 ರಷ್ಟು ಇಂಜಿನಿಯರ್‌ಗಳು

**(1ನೇ ಪುಟದಿಂದ)** ಪಡೆಯುವ ಸಾಧ್ಯತೆಯೂ ಇರುತ್ತದೆ. ಆದರೆ, ರಿಸ್ಕ್ ತೆಗೆದುಕೊಳ್ಳಬಾರದು ಎಂದು ದೊಡ್ಡ ಕಂಪನಿಯ ಉದ್ಯೋಗ ಹುಡುಕಿಕೊಂಡು ಹೋಗುವ ಮನೋಭಾವದಿಂದ ಹಿಂದೆ ಬೀಳುತ್ತಿದ್ದಾರೆ ಎಂದವರು ವಿಷಾದಿಸಿದರು.

ಮತ್ತೊಂದೆಡೆ ಸಾಕ್ಷರರಲ್ಲದವರು ಹಾಗೂ ಕಡಿಮೆ ಓದಿದವರೂ ಜೀವನದಲ್ಲಿ ರಿಸ್ಕ್ ತೆಗೆದುಕೊಳ್ಳುವ ಮನೋಭಾವದಿಂದ ದೊಡ್ಡ ಉದ್ಯಮಿಗಳಾಗಿದ್ದಾರೆ. ಇಂಜಿನಿಯರ್‌ಗಳಾದವರು ತಮ್ಮ ಮನೋಭಾವ ಬದಲಿಸಿಕೊಂಡರೆ ಮಾತ್ರ ಬೆಳವಣಿಗೆ ಸಾಧ್ಯ ಎಂದು ತಿಳಿಸಿದರು.

ಇನ್ನೋರ್ವ ಮುಖ್ಯ ಅತಿಥಿ ದಾವಣಗೆರೆ ವಿ.ವಿ. ಮೌಲ್ಯಾಂಕನ ಕುಲಸಚಿವ ಡಾ. ಕೆ. ಶಿವಶಂಕರ್ ಮಾತನಾಡಿ, ಕೃತಕ ಬುದ್ಧಿವಂತಿಕೆ, ಬ್ಲಾಕ್‌ಚೈನ್, ಸೈಬರ್, ಡಾಟಾ ಹಾಗೂ ಇಂಧನ ವಲಯಗಳು ಭವಿಷ್ಯವನ್ನು ರೂಪಿಸುತ್ತಿವೆ. ಈ ವಲಯಗಳಿಗೆ ಇಂಜಿನಿಯರ್‌ಗಳು ಹೆಚ್ಚಿನ ಆದ್ಯತೆ ನೀಡಬೇಕು ಎಂದು ಹೇಳಿದರು.

ವೇದಿಕೆಯ ಮೇಲೆ ಬಿ.ಐ.ಇ.ಟಿ. ನಿರ್ದೇಶಕ ವೈ. ವೃಷಭೇಂದ್ರಪ್ಪ, ಪ್ರಾಂಶುಪಾಲ ಹೆಚ್.ಬಿ. ಅರವಿಂದ, ವಿವಿಧ ವಿಭಾಗಗಳ ಮುಖ್ಯಸ್ಥರಾದ ಎಸ್. ಕುಮಾರಪ್ಪ, ಎಸ್. ಸುರೇಶ್, ಸಿ.ಆರ್. ನಿರ್ಮಲ, ಮಾನವೇಂದ್ರ, ಬಿ. ಪೂರ್ಣಿಮ, ಜಿ.ಎಸ್. ಸುನಿತಾ, ದೇವೇಂದ್ರಪ್ಪ, ಸಿ.ಎಂ. ಕಲ್ಲೇಶಪ್ಪ ಮತ್ತಿತರರು ಉಪಸ್ಥಿತರಿದ್ದರು.

ದಿವ್ಯ ಹಿರೇಮಠ್ ಪ್ರಾರ್ಥಿಸಿದರು. ಎ.ಜಿ. ಶಂಕರಮೂರ್ತಿ ಸ್ವಾಗತಿಸಿದರು. ವಿಶ್ವನಾಥ್ ಹಾಗೂ ಶ್ರಾವಣಿ ನಿರೂಪಿಸಿದರು.

Vijayavani 11-06-2023

### ಇಂಜಿನಿಯರ್‌ಗಳಿಗೆ ಯತೀಶ್ ಕಿವಿಮಾತು | ಬಿಐಇಟಿ ಕಾಲೇಜಿನಲ್ಲಿ ಪದವಿ ದಿನಾಚರಣೆ

# ಸವಾಲೆದುರಿಸಲು ಬೇಡ ಹಿಂಜರಿಕೆ

■ ವಿಜಯವಾಣಿ ಸುದ್ದಿಜಾಲ ದಾವಣಗೆರೆ

ಅನಕ್ಷರಸ್ಥರು, ಕಡಿಮೆ ಓದಿದ ಕೆಲವರು ಜೀವನದಲ್ಲಿ ರಿಸ್ಕ್ ತೆಗೆದುಕೊಂಡ ಕಾರಣಕ್ಕೆ ದೊಡ್ಡ ಉದ್ಯಮಿಗಳಾಗಿದ್ದಾರೆ. ಇಂಜಿನಿಯರ್‌ಗಳು ಕೂಡ ಮನೋಭಾವ ಬದಲಿಸಿಕೊಂಡರೆ ಮಾತ್ರ ಬೆಳವಣಿಗೆ ಸಾಧ್ಯ ಎಂದು ಬೆಂಗಳೂರು ನಗರ ಪೊಲೀಸ್ ವಿಭಾಗದ ಡಿ.ಸಿ.ಪಿ. ಜಿ.ಎಚ್. ಯತೀಶ್ ಚಂದ್ರ ತಿಳಿಸಿದರು.

ನಗರದ ಬಿಐಇಟಿ ಕಾಲೇಜಿನಲ್ಲಿ ಶನಿವಾರ ಆಯೋಜಿಸಿದ್ದ 40ನೇ ಪದವಿ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕೆಲ ಯುವ ಇಂಜಿನಿಯರ್‌ಗಳಲ್ಲಿ ಉತ್ತಮ ಯೋಜನೆಗಳಿರುತ್ತವೆ. ತಾವೇ ಕೈಗಾರಿಕೆ ಆರಂಭಿಸಿ ಯೋಜನೆಗಳನ್ನು ತಾವೇ ಕಾರ್ಯಗತಗೊಳಿಸಿದಲ್ಲಿ ಉತ್ತಮ ಆದಾಯ ಪಡೆಯುವ ಸಾಧ್ಯತೆಯಿದೆ. ಆದರೆ, ರಿಸ್ಕ್ ಸಹವಾಸದಿಂದ ದೂರ ಉಳಿದು ದೊಡ್ಡ ಕಂಪನಿಯ ಉದ್ಯೋಗ ಹುಡುಕಿಕೊಂಡು ಹೋಗುವ ಮನೋಭಾವದಿಂದ ಹಿಂದೆ ಬೀಳುತ್ತಿದ್ದಾರೆ ಎಂದು ವಿಷಾದಿಸಿದರು.

ದೊಡ್ಡ ಸಾಧನೆ ಮಾಡುತ್ತಿರುವವರಲ್ಲಿ ಇಂಜಿನಿಯರ್‌ಗಳ ಪಾಲು ಶೇ.40ರಷ್ಟಿದೆ. ಇಂಜಿನಿಯರಿಂಗ್ ಮಾತ್ರವಲ್ಲದೆ ಎಲ್ಲ ವಲಯಗಳಲ್ಲಿ ಸಾಧಕರಿದ್ದಾರೆ. ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಸಮಸ್ಯೆ ಬಗೆಹರಿಸುವುದನ್ನು ಕಲಿಸಲಾಗುತ್ತದೆ. ಮುಂದಿನ ದಿನಗಳಲ್ಲಿ ಈ ಕಲೆ ಎಲ್ಲ ವಲಯಗಳಲ್ಲಿ ಉಪಯೋಗಕ್ಕೆ ಬರುತ್ತದೆ ಎಂದು ಹೇಳಿದರು.

ಯಶಸ್ಸು ಗಳಿಸಲು ಚಿಕ್ಕ ವಯಸ್ಸಿನಲ್ಲೇ ಉದ್ಯಮಶೀಲತಾ ಗುಣ ಬೆಳೆಸಿಕೊಳ್ಳಬೇಕು. ಕಂಪನಿಯೊಂದರ ಉದ್ಯೋಗಿಯಾಗುವ ಮನೋಭಾವ ಬಿಟ್ಟು, ಉದ್ಯಮ ಆರಂಭಿಸುವ ಸ್ಫೂರ್ತಿ ಹೊಂದಬೇಕು. ಮಾನಸಿಕ-ದೈಹಿಕ ಆರೋಗ್ಯದ ಕಡೆ ಹೆಚ್ಚಿನ ಕಾಳಜಿ, ಕುಟುಂಬದಲ್ಲಿ ಉತ್ತಮ ಸಂಬಂಧ, ಜೀವನದಲ್ಲಿ ಹೆಚ್ಚು ಸ್ವಾತಂತ್ರ್ಯ ನೀಡುವಷ್ಟು ಆದಾಯ, ಉತ್ತಮ ಸ್ನೇಹಿತರು ಹಾಗೂ ಹವ್ಯಾಸಗಳು ಕೂಡ ಯಶಸ್ಸು ತರುತ್ತವೆ ಎಂದು ಹೇಳಿದರು.

ದಾವಣಗೆರೆ ವಿ.ವಿ. ಮೌಲ್ಯಾಂಕನ ಕುಲಸಚಿವ ಡಾ. ಕೆ. ಶಿವಶಂಕರ್ ಮಾತನಾಡಿ, ಕೃತಕ ಬುದ್ಧಿವಂತಿಕೆ, ಬ್ಲಾಕ್‌ಚೈನ, ಸೈಬರ್, ಡಾಟಾ ಹಾಗೂ ಇಂಧನ ವಲಯಗಳು ಭವಿಷ್ಯ ರೂಪಿಸುತ್ತಿವೆ. ಈ ವಲಯಗಳಿಗೆ ಇಂಜಿನಿಯರ್‌ಗಳು ಹೆಚ್ಚಿನ ಆದ್ಯತೆ ನೀಡಬೇಕು ಎಂದು ಹೇಳಿದರು.

ಬಿ.ಐ.ಇ.ಟಿ. ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ, ಪ್ರಾಚಾರ್ಯ ಎಚ್.ಬಿ. ಅರವಿಂದ, ವಿವಿಧ ವಿಭಾಗಗಳ ಮುಖ್ಯಸ್ಥರಾದ ಎಸ್. ಕುಮಾರಪ್ಪ, ಎಸ್. ಸುರೇಶ್, ಸಿ.ಆರ್. ನಿರ್ಮಲಾ, ಮಾನವೇಂದ್ರ, ಬಿ. ಪೂರ್ಣಿಮಾ, ಜಿ.ಎಸ್. ಸುನಿತಾ, ದೇವೇಂದ್ರಪ್ಪ, ಸಿ.ಎಂ. ಕಲ್ಲೇಶಪ್ಪ ಇದ್ದರು. ದಿವ್ಯಾ ಹಿರೇಮಠ್ ಪ್ರಾರ್ಥಿಸಿದರು. ಎ.ಜಿ. ಶಂಕರಮೂರ್ತಿ ಸ್ವಾಗತಿಸಿದರು. ವಿಶ್ವನಾಥ್ ಹಾಗೂ ಶ್ರಾವಣಿ ಕಾರ್ಯಕ್ರಮ ನಿರೂಪಿಸಿದರು.



ದಾವಣಗೆರೆಯ ಬಿಐಇಟಿ ಕಾಲೇಜಿನಲ್ಲಿ ಶನಿವಾರ ಆಯೋಜಿಸಿದ್ದ 40ನೇ ಪದವಿ ದಿನಾಚರಣೆ ಕಾರ್ಯಕ್ರಮವನ್ನು ಬೆಂಗಳೂರು ನಗರ ಪೊಲೀಸ್ ವಿಭಾಗದ ಡಿ.ಸಿ.ಪಿ. ಜಿ.ಎಚ್. ಯತೀಶ್ ಚಂದ್ರ ಉದ್ಘಾಟಿಸಿದರು. ಡಾ. ಕೆ. ಶಿವಶಂಕರ್, ಪ್ರೊ. ವೈ. ವೃಷಭೇಂದ್ರಪ್ಪ, ಎಚ್.ಬಿ. ಅರವಿಂದ, ಎಸ್. ಕುಮಾರಪ್ಪ, ಎಸ್.ಸುರೇಶ್, ಸಿ.ಆರ್. ನಿರ್ಮಲಾ ಇತರರಿದ್ದರು.

Samyuktha karnataka 11-06-2023

# ಇಂಜಿನಿಯರ್‌ಗಳು ಸವಾಲು ಸ್ವೀಕರಿಸಿ ಉದ್ಯಮ ಪ್ರಾರಂಭಿಸಿ

**ದಾವಣಗೆರೆ:** ಕೆಲವು ಯುವ ಇಂಜಿನಿಯರ್‌ಗಳಲ್ಲಿ ಉತ್ತಮ ಯೋಜನೆಗಳಿರುತ್ತವೆ. ತಾವೇ ಕೈಗಾರಿಕೆ ಆರಂಭಿಸಿ ಯೋಜನೆಗಳನ್ನು ತಾವೇ ಕಾರ್ಯಗತಗೊಳಿಸಿದಲ್ಲಿ ಉತ್ತಮ ಆದಾಯ ಪಡೆಯುವ ಸಾಧ್ಯತೆಯೂ ಇರುತ್ತದೆ. ಆದರೆ, ಸವಾಲು ತೆಗೆದುಕೊಳ್ಳಲು ಮುಂದೆಬಾರದೆ ದೊಡ್ಡ ಕಂಪನಿಯ ಉದ್ಯೋಗ ಹುಡುಕಿಕೊಂಡು ಹೋಗುವ ಮನೋಭಾವದಿಂದ ಹಿಂದೆ ಬೀಳುತ್ತಿದ್ದಾರೆ ಎಂದು ಬೆಂಗಳೂರಿನ ನಗರ ಪೊಲೀಸ್ ವಿಭಾಗದ ಡಿ.ಸಿ.ಪಿ. ಜೆ.ಎಚ್. ಯತೀಶ್ ಚಂದ್ರ ವಿಷಾದಿಸಿದರು.

ನಗರದ ಬಿಐಇಟಿ ಕಾಲೇಜಿನಲ್ಲಿ ಆಯೋಜಿಸಿದ್ದ 40ನೇ ಪದವಿ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಮತ್ತೊಂದೆಡೆ ಸಾಕ್ಷರರಲ್ಲದವರು ಹಾಗೂ ಕಡಿಮೆ ಓದಿದವರೂ ಜೀವನದಲ್ಲಿ ರಿಸ್ಕ್ ತೆಗೆದುಕೊಳ್ಳುವ ಮನೋಭಾವದಿಂದ ದೊಡ್ಡ ಉದ್ಯಮಿಗಳಾಗಿದ್ದಾರೆ ಎಂದರು. ಯಶಸ್ಸು ಗಳಿಸಬೇಕಾದರೆ ಚಿಕ್ಕ ವಯಸ್ಸಿನಲ್ಲೇ



ದಾವಣಗೆರೆಯ ಬಿಐಇಟಿ ಕಾಲೇಜಿನಲ್ಲಿ ಆಯೋಜಿಸಿದ್ದ 40ನೇ ಪದವಿ ದಿನಾಚರಣೆಯನ್ನು ಡಿಸಿಪಿ ಜೆ.ಎಚ್.ಯತೀಶ್‌ಚಂದ್ರ ಉದ್ಘಾಟಿಸಿದರು.

ಉದ್ಯಮಶೀಲತೆಯ ಗುಣ ಬೆಳೆಸಿಕೊಳ್ಳಬೇಕು. ಉದ್ಯೋಗಿಯಾಗುವ ಮನೋಭಾವ ಬಿಟ್ಟು, ಉದ್ಯಮ ಆರಂಭಿಸುವ ಸ್ಫೂರ್ತಿ ಹೊಂದಬೇಕು. ಇಂಜಿನಿಯರ್‌ಗಳಾದವರು ತಮ್ಮ ಮನೋಭಾವ ಬದಲಿಸಿಕೊಂಡರೆ ಮಾತ್ರ ಬೆಳವಣಿಗೆ ಸಾಧ್ಯ ಎಂದು ತಿಳಿಸಿದರು.

ದೊಡ್ಡ ಸಾಧನೆ ಮಾಡುತ್ತಿರುವವರಲ್ಲಿ ಇಂಜಿನಿಯರ್‌ಗಳ ಪಾಲು ಶೇ.40ರಷ್ಟಿದೆ. ಕೇವಲ ಇಂಜಿನಿಯರಿಂಗ್ ವಲಯವಷ್ಟೇ ಅಲ್ಲದೇ ನಾಗರಿಕ ಸೇವೆಗಳೂ ಸೇರಿದಂತೆ ಎಲ್ಲ ವಲಯಗಳಲ್ಲಿ ಸಾಧಕರಿದ್ದಾರೆ. ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಸಮಸ್ಯೆ ಬಗೆಹರಿಸುವುದನ್ನು ಕಲಿಸಲಾಗುತ್ತದೆ. ಮುಂದಿನ ದಿನಗಳಲ್ಲಿ ಈ ಸಮಸ್ಯೆ ಬಗೆಹರಿಸುವ ಕಲೆ ಎಲ್ಲ ವಲಯಗಳಲ್ಲಿ ಉಪಯೋಗಕ್ಕೆ ಬರುತ್ತದೆ ಎಂದು ಕಿವಿಮಾತು ಹೇಳಿದರು.

ದಾವಣಗೆರೆ ವಿ.ವಿ. ಮೌಲ್ಯಾಂಕನ ಕುಲಸಚಿವ ಡಾ.ಕೆ. ಶಿವಶಂಕರ್ ಮಾತನಾಡಿ, ಕೃತಕ ಬುದ್ಧಿವಂತಿಕೆ, ಬ್ಲಾಕ್‌ಚೈನ್, ಸೈಬರ್, ಡಾಟಾ ಹಾಗೂ ಇಂಧನ ವಲಯಗಳು ಭವಿಷ್ಯವನ್ನು ರೂಪಿಸುತ್ತಿವೆ. ಈ ವಲಯಗಳಿಗೆ ಇಂಜಿನಿಯರ್‌ಗಳು ಹೆಚ್ಚಿನ ಆದ್ಯತೆ ನೀಡಬೇಕು ಎಂದು ಹೇಳಿದರು. ವೇದಿಕೆಯ ಮೇಲೆ ಬಿಐಇಟಿ ನಿರ್ದೇಶಕ ಪ್ರೊ.ವೈ. ವೃಷಭೇಂದ್ರಪ್ಪ, ಪ್ರಾಂಶುಪಾಲ ಎಚ್.ಬಿ. ಅರವಿಂದ, ಎಸ್.ಕುಮಾರಪ್ಪ, ಎಸ್. ಸುರೇಶ್, ಸಿ.ಆರ್.ನಿರ್ಮಲ, ಮಾನವೇಂದ್ರ, ಬಿ. ಪೂರ್ಣಿಮಾ, ಜಿ.ಎಸ್.ಸುನಿತಾ, ದೇವೇಂದ್ರಪ್ಪ, ಸಿ.ಎಂ. ಕಲ್ಲೇಶಪ್ಪ ಇದ್ದರು. ದಿವ್ಯ ಹಿರೇಮಠ್ ಪ್ರಾರ್ಥಿಸಿದರು. ಶಂಕರಮೂರ್ತಿ ಸ್ವಾಗತಿಸಿದರು. ವಿಶ್ವನಾಥ್, ಶ್ರಾವಣಿ ನಿರೂಪಿಸಿದರು.

# ಇಂಜಿನಿಯರ್‌ಗಳು ಉದ್ಯೋಗ ಹುಡುಕದೆ ಉದ್ಯಮಿಗಳಾಗಬೇಕು: ಯತೀಶ್ ಚಂದ್ರ

Nagaravani 11-06-2023




ದಾ.ನಗರವಾಣಿ ಸುದ್ದಿ

ದಾವಣಗೆರೆ.ಜೂ.10: ಯುವ ಇಂಜಿನಿಯರ್‌ಗಳು ತಮ್ಮಲ್ಲಿರುವ ಉತ್ತಮ ಯೋಜನೆಗಳನ್ನು ಕಾರ್ಯಗತಗೊಳಿಸಿದಲ್ಲಿ ಒಳ್ಳೆಯ ಆದಾಯ ಪಡೆಯುವ ಸಾಧ್ಯತೆ ಹೆಚ್ಚಾಗಿರುತ್ತವೆ ಎಂದು ಬೆಂಗಳೂರು ನಗರ ಪೊಲೀಸ್ ವಿಭಾಗದ ಡಿ.ಸಿ.ಪಿ. ಜಿ.ಹೆಚ್. ಯತೀಶ್ ಚಂದ್ರ ಹೇಳಿದರು.

ಶನಿವಾರ ನಗರದ ಬಿಐಇಟಿ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ 40ನೇ ಪದವಿ ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದೇಶದಲ್ಲಿಂದು ದೊಡ್ಡ ಸಾಧನೆ ಮಾಡುತ್ತಿರುವವರಲ್ಲಿ ಇಂಜಿನಿಯರ್‌ಗಳ ಪಾಲು ಶೇ.40ರಷ್ಟಿದೆ. ಕೇವಲ ಇಂಜಿನಿಯರಿಂಗ್ ವಲಯವಷ್ಟೇ ಅಲ್ಲದೇ ನಾಗರಿಕ ಸೇವೆಗಳೂ ಸೇರಿದಂತೆ ಎಲ್ಲ ವಲಯಗಳಲ್ಲಿ ಸಾಧಕರಿದ್ದಾರೆ. ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಸಮಸ್ಯೆ ಬಗೆಹರಿಸುವುದನ್ನು ಕಲಿಸಲಾಗುತ್ತದೆ. ಮುಂದಿನ ದಿನಗಳಲ್ಲಿ ಈ ಸಮಸ್ಯೆ ಬಗೆಹರಿಸುವ ಕಲೆ ಎಲ್ಲ ವಲಯಗಳಲ್ಲಿ ಉಪಯೋಗಕ್ಕೆ ಬರುತ್ತದೆ. ಯಶಸ್ಸು ಗಳಿಸಬೇಕಾದರೆ ಚಿಕ್ಕ ವಯಸ್ಸಿನಲ್ಲೇ ಉದ್ಯಮಶೀಲತೆಯ ಗುಣ ಬೆಳೆಸಿಕೊಳ್ಳಬೇಕು. ಉದ್ಯೋಗಿಯಾಗುವ ಮನೋಭಾವ ಬಿಟ್ಟು, ಉದ್ಯಮ ಆರಂಭಿಸುವ ಸ್ಫೂರ್ತಿ ಹೊಂದಬೇಕು ಎಂದು ಕಿವಿಮಾತು ಹೇಳಿದರು.

ಯುವ ಇಂಜಿನಿಯರ್‌ಗಳ ಬಳಿ ಉತ್ತಮ ಯೋಜನೆಗಳಿರುತ್ತವೆ. ತಾವೇ ಕೈಗಾರಿಕೆ ಆರಂಭಿಸಿ ಯೋಜನೆಗಳನ್ನು ತಾವೇ ಕಾರ್ಯಗತಗೊಳಿಸಿದಲ್ಲಿ ಉತ್ತಮ ಆದಾಯ ಪಡೆಯುವ ಸಾಧ್ಯತೆಯೂ ಇರುತ್ತದೆ. ಆದರೆ, ಜಂಜಾಟ ತೆಗೆದುಕೊಳ್ಳಬಾರದು ಎಂದು ದೊಡ್ಡ ಕಂಪನಿಯ ಉದ್ಯೋಗ ಹುಡುಕಿಕೊಂಡು ಹೋಗುವ ಮನೋಭಾವದಿಂದ ಹಿಂದೆ ಬೀಳುತ್ತಿದ್ದಾರೆ ಎಂದರು.

(4ನೇ ಪುಟಕ್ಕೆ)

# ಇಂಜಿನಿಯರ್‌ಗಳು ಉದ್ಯೋಗ ಹುಡುಕದೆ...

(1ನೇ ಪುಟದಿಂದ) ಮತ್ತೊಂದೆಡೆ ಸಾಕ್ಷರರಲ್ಲದವರು ಹಾಗೂ ಕಡಿಮೆ ಓದಿದವರೂ ಜೀವನದಲ್ಲಿ ರಿಸ್ಕ್ ತೆಗೆದುಕೊಳ್ಳುವ ಮನೋಭಾವದಿಂದ ದೊಡ್ಡ ಉದ್ಯಮಿಗಳಾಗಿದ್ದಾರೆ. ಇಂಜಿನಿಯರ್‌ಗಳಾದವರು ತಮ್ಮ ಮನೋಭಾವ ಬದಲಿಸಿಕೊಂಡರೆ ಮಾತ್ರ ಬೆಳವಣಿಗೆ ಸಾಧ್ಯ ಎಂದು ತಿಳಿಸಿದರು.

ದಾವಣಗೆರೆ ವಿ.ವಿ. ಮೌಲ್ಯ ಮಾಪನ ಕುಲಸಚಿವ ಡಾ.ಕೆ.ಶಿವಶಂಕರ್ ಮಾತನಾಡಿ, ಪ್ರಸ್ತುತ ಕೃತಕ ಬುದ್ಧಿಮತ್ತೆ, ಬ್ಲಾಕ್‌ಚೈನ್, ಸೈಬರ್, ಡಾಟಾ ಹಾಗೂ ಇಂಧನ ವಲಯಗಳು ಭವಿಷ್ಯವನ್ನು ರೂಪಿಸುತ್ತಿವೆ. ಈ ವಲಯಗಳಿಗೆ ಇಂಜಿನಿಯರ್‌ಗಳು ಹೆಚ್ಚಿನ ಆದ್ಯತೆ ನೀಡಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಬಿ.ಐ.ಇ.ಟಿ. ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ, ಪ್ರಾಂಶುಪಾಲ ಹೆಚ್.ಬಿ. ಅರವಿಂದ, ವಿವಿಧ ವಿಭಾಗಗಳ ಮುಖ್ಯಸ್ಥರಾದ ಎಸ್. ಕುಮಾರಪ್ಪ, ಎಸ್. ಸುರೇಶ್, ಸಿ.ಆರ್. ನಿರ್ಮಲ, ಮಾನವೇಂದ್ರ, ಬಿ. ಪೂರ್ಣಿಮ, ಜಿ.ಎಸ್. ಸುನಿತಾ, ದೇವೇಂದ್ರಪ್ಪ, ಸಿ.ಎಂ. ಕಲ್ಲೇಶಪ್ಪ ಮತ್ತಿತರರು ಉಪಸ್ಥಿತರಿದ್ದರು.

Prajavani 11-06-2023

ಬೆಂಗಳೂರು ನಗರ ಪೊಲೀಸ್ ವಿಭಾಗದ ಡಿಸಿಪಿ ಜಿ.ಎಚ್.ಯತೀಶ್ ಚಂದ್ರ ಸಲಹೆ

# ಉದ್ಯೋಗಿಗಳಾಗುವ ಬದಲು ಉದ್ಯಮ ಆರಂಭಿಸಿ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಚಿಕ್ಕ ವಯಸ್ಸಿನಲ್ಲಿಯೇ ಉದ್ಯಮಶೀಲತೆಯ ಗುಣ ಬೆಳೆಸಿಕೊಳ್ಳಬೇಕು. ಉದ್ಯೋಗಿಯಾಗುವ ಮನೋಭಾವ ಬಿಟ್ಟು, ಉದ್ಯಮ ಆರಂಭಿಸುವ ಸ್ಫೂರ್ತಿ ನಿಮ್ಮಲ್ಲಿದ್ದರೆ ಯಶಸ್ಸು ಪಡೆಯಬಹುದು ಎಂದು ಬೆಂಗಳೂರು ನಗರ ಪೊಲೀಸ್ ವಿಭಾಗದ ಡಿಸಿಪಿ ಜಿ.ಎಚ್. ಯತೀಶ್ ಚಂದ್ರ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ನಗರದ ಬಾಪೂಜಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಶನಿವಾರ ಆಯೋಜಿಸಿದ್ದ 40ನೇ ಪದವಿ ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಕೆಲ ಯುವ ಎಂಜಿನಿಯರ್‌ಗಳಲ್ಲಿ ಉತ್ತಮ ಯೋಜನೆಗಳಿರುತ್ತವೆ. ತಾವೇ ಕೈಗಾರಿಕೆ ಆರಂಭಿಸಿ ಯೋಜನೆಗಳನ್ನು ತಾವೇ ಕಾರ್ಯಗತಗೊಳಿಸಿದಲ್ಲಿ ಉತ್ತಮ ಆದಾಯ ಪಡೆಯುವ ಸಾಧ್ಯತೆಯೂ ಇರುತ್ತದೆ. ಆದರೆ, ಅಪಾಯ ಮೈಮೇಲೆ ಎಳೆದುಕೊಳ್ಳಬಾರದು ಎಂದು ದೊಡ್ಡ ಕಂಪನಿಯ ಉದ್ಯೋಗ ಹುಡುಕಿಕೊಂಡು ಹೋಗುವ ಮನೋಭಾವದಿಂದ ಹಿಂದೆ ಬೀಳುತ್ತಿದ್ದಾರೆ' ಎಂದು ವಿಷಾದ ವ್ಯಕ್ತಪಡಿಸಿದರು.

'ಸಾಕ್ಷರರಲ್ಲದವರು ಹಾಗೂ ಕಡಿಮೆ ಓದಿದವರೂ ಜೀವನದಲ್ಲಿ ಅಪಾಯ ತೆಗೆದುಕೊಂಡೇ ಸಾಧನೆ ಮಾಡಿ ದೊಡ್ಡ ಉದ್ಯಮಿಗಳಾಗಿದ್ದಾರೆ. ಎಂಜಿನಿಯರ್‌ಗಳು ತಮ್ಮ ಮನೋಭಾವ ಬದಲಿಸಿಕೊಂಡರೆ ಮಾತ್ರ ಬೆಳವಣಿಗೆ ಸಾಧ್ಯ' ಎಂದು ಕಿವಿಮಾತು ಹೇಳಿದರು.

'ದೊಡ್ಡ ಸಾಧನೆ ಮಾಡುತ್ತಿರುವವರಲ್ಲಿ ಎಂಜಿನಿಯರ್‌ಗಳ ಪಾಲು ಶೇ 40ರಷ್ಟಿದೆ. ಎಂಜಿನಿಯರಿಂಗ್ ವಲಯವಷ್ಟೇ ಅಲ್ಲದೇ ನಾಗರಿಕ ಸೇವೆಗಳು ಸೇರಿದಂತೆ ಎಲ್ಲಾ ವಲಯಗಳಲ್ಲಿ ಸಾಧಕರಿದ್ದಾರೆ. ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಸಮಸ್ಯೆ ಬಗೆಹರಿಸುವುದನ್ನು ಕಲಿಸಲಾಗುತ್ತದೆ. ಮುಂದಿನ ದಿನಗಳಲ್ಲಿ ಈ ಸಮಸ್ಯೆ ಬಗೆಹರಿಸುವ ಕಲೆ ಎಲ್ಲ ವಲಯಗಳಲ್ಲಿ ಉಪಯೋಗಕ್ಕೆ ಬರುತ್ತದೆ' ಎಂದು ಹೇಳಿದರು.

'ಕೃತಕ ಬುದ್ಧಿಮತ್ತೆ, ಬ್ಲಾಕ್‌ಚೈನ್, ಸೈಬರ್, ಡಾಟಾ ಹಾಗೂ ಇಂಧನ ವಲಯಗಳು ಭವಿಷ್ಯವನ್ನು ರೂಪಿಸುತ್ತಿವೆ. ಈ ವಲಯಗಳಿಗೆ ಎಂಜಿನಿಯರ್‌ಗಳು ಹೆಚ್ಚಿನ ಆದ್ಯತೆ ನೀಡಬೇಕು' ದಾವಣಗೆರೆ ವಿಶ್ವವಿದ್ಯಾಲಯದ ಕುಲಸಚಿವ (ಮೌಲ್ಯಮಾಪನ) ಡಾ. ಕೆ. ಶಿವಶಂಕರ್ ಹೇಳಿದರು.

ವೇದಿಕೆಯ ಮೇಲೆ ಬಿ.ಐ.ಇ.ಟಿ. ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ, ಪ್ರಾಂಶುಪಾಲ ಎಚ್.ಬಿ. ಅರವಿಂದ, ವಿವಿಧ ವಿಭಾಗಗಳ ಮುಖ್ಯಸ್ಥರಾದ ಎಸ್. ಕುಮಾರಪ್ಪ, ಎಸ್. ಸುರೇಶ್, ಸಿ.ಆರ್. ನಿರ್ಮಲ, ಮಾನವೇಂದ್ರ, ಬಿ. ಪೂರ್ಣಿಮ, ಜಿ.ಎಸ್. ಸುನಿತಾ, ದೇವೇಂದ್ರಪ್ಪ, ಸಿ.ಎಂ. ಕಲ್ಲೇಶಪ್ಪ ಉಪಸ್ಥಿತರಿದ್ದರು.

ದಿವ್ಯ ಹಿರೇಮಠ್ ಪ್ರಾರ್ಥಿಸಿದರು. ಎ.ಜಿ. ಶಂಕರಮೂರ್ತಿ ಸ್ವಾಗತಿಸಿದರು. ವಿಶ್ವನಾಥ್, ಶ್ರಾವಣಿ ನಿರೂಪಿಸಿದರು.




ದಾವಣಗೆರೆಯ ಬಾಪೂಜಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ 40ನೇ ಪದವಿ ದಿನಾಚರಣೆಯನ್ನು ಉದ್ಘಾಟಿಸಲಾಯಿತು

 Vijaya Karnataka
11-06-2023


ಬಾಪೂಜಿ ಎಂಜಿನಿಯರಿಂಗ್ ಕಾಲೇಜು ಪದವಿ ಪ್ರದಾನ ಸಮಾರಂಭ | ಹೊಸತನ ಸೃಷ್ಟಿಸುವುದೇ ಎಂಜಿನಿಯರ್ ಕೆಲಸ

# ಬದಲಾವಣೆ ತರುವ ಕೆಲಸ ಮಾಡಿ

■ **ವಿಕ ಸುದ್ದಿಲೋಕ** ದಾವಣಗೆರೆ

ಸಮಾಜದ ಒಳಿತಿಗಾಗಿ ಏನಾದರೊಂದು ಹೊಸತನ್ನು ಸೃಷ್ಟಿಸುವುದು ಎಂಜಿನಿಯರ್ ಕೆಲಸವೇ ಹೊರತು ಈಗ ಇರುವುದನ್ನೇ ಕಾಪಿ ಪೇಸ್ಟ್ ಮಾಡುವುದಲ್ಲ ಎಂದು ಕೇಂದ್ರ ಅಪರಾಧ ವಿಭಾಗದ ಡಿಸಿಪಿ, ಬಿಐಇಟಿ ಕಾಲೇಜು ಹಿರಿಯ ವಿದ್ಯಾರ್ಥಿ ಜೆ.ಎಚ್. ಯತೀಶ್ ಚಂದ್ರ ಅಭಿಪ್ರಾಯಪಟ್ಟರು.

ನಗರದ ಬಾಪೂಜಿ ಎಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ಎಸ್. ಎಸ್. ಮಲ್ಲಿಕಾರ್ಜುನ ಸಾಂಸ್ಕೃತಿಕ ಕೇಂದ್ರದಲ್ಲಿ ಶನಿವಾರ ಆಯೋಜಿಸಿದ್ದ ಕಾಲೇಜಿನ 40ನೇ ಪದವಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿ, ಎಂಜಿನಿಯರ್‌ಗಳಿಂದ ಸಮಾಜ ಹೊಸತನ್ನು ನಿರೀಕ್ಷಿಸುತ್ತದೆ. ಹೀಗಾಗಿ ಸಾಮಾಜಿಕವಾಗಿ ಜನ ಜೀವನದಲ್ಲಿ ಬದಲಾವಣೆ ತರುವಂತಹ ಕೆಲಸಗಳನ್ನು ಎಂಜಿನಿಯರ್‌ಗಳು ಮಾಡಬೇಕು ಎಂದರು.

ಇಂದು ಯಾವುದೇ ಕ್ಷೇತ್ರಕ್ಕೆ ಹೋದರೂ ಎಂಜಿನಿಯರುಗಳು ಕಾಣಸಿಗುತ್ತಾರೆ. ದೇಶದ ಕೋಟ್ಯಾಧೀಶರು, ಉದ್ಯಮಿಗಳು ನಾನಾ ಕ್ಷೇತ್ರಗಳ ಸಾಧಕರ ಪೈಕಿ ಶೇ.40ರಷ್ಟು ಮಂದಿ ಎಂಜಿನಿಯರ್‌ಗಳಿದ್ದಾರೆ. ಅಷ್ಟೇ ಏಕೆ ಕೇಂದ್ರ ಲೋಕಸೇವಾ ಆಯೋಗದ ಪರೀಕ್ಷೆ ಉತ್ತೀರ್ಣರಾಗುವವರಲ್ಲಿ ಹೆಚ್ಚಿನವರು ಎಂಜಿನಿಯರ್‌ಗಳೇ ಎಂಬುದು ಹೆಮ್ಮೆಯ ವಿಷಯ. ಎಂಜಿನಿಯರ್‌ಗಳಿಂದಲೇ ಏಕೆ ಇಷ್ಟೆಲ್ಲಾ ಸಾಧ್ಯ ಎಂದರೆ ಅವರಲ್ಲಿ ಸಮಸ್ಯೆ ಪರಿಹರಿಸುವ ಆಲೋಚನೆಗಳು ಹೆಚ್ಚಾಗಿರುತ್ತವೆ. ಸಮಸ್ಯೆಗೆ ಪರಿಹಾರ ಕಂಡುಹಿಡಿಯುವ ಸಾಮರ್ಥ್ಯ ಕೂಡ ಇರುತ್ತದೆ. ಹೀಗಾಗಿ ಎಂಜಿನಿಯರಿಂಗ್ ಮುಗಿಸಿರುವ ವಿದ್ಯಾರ್ಥಿಗಳು ತಮ್ಮಲ್ಲಿರುವ ಈ ಕೌಶಲ್ಯವನ್ನು ಸಮರ್ಥವಾಗಿ ಬಳಸಿಕೊಳ್ಳಲು ಕಲಿಯಬೇಕು ಎಂದರು.



ದಾವಣಗೆರೆಯ ಬಿಐಇಟಿ ಕಾಲೇಜಿನಲ್ಲಿ ಶನಿವಾರ ಹಮ್ಮಿಕೊಂಡಿದ್ದ 40ನೇ ಪದವಿ ಪ್ರದಾನ ಸಮಾರಂಭವನ್ನು ಸಿಸಿಬಿ ಡಿಸಿಪಿ ಜೆ.ಎಚ್. ಯತೀಶ್ ಚಂದ್ರ ಉದ್ಘಾಟಿಸಿದರು. ದಾವಣಗೆರೆ ವಿವಿ ಕುಲಸಚಿವ ಡಾ.ಕೆ. ಶಿವಶಂಕರ್, ಪ್ರೊ.ವೈ. ವೃಷಬೇಂದ್ರಪ್ಪ ಇತರರಿದ್ದರು.

ದಾವಣಗೆರೆ ವಿವಿ ಪರೀಕ್ಷಾಂಗ ವಿಭಾಗದ ಕುಲಸಚಿವ ಡಾ.ಕೆ. ಶಿವಶಂಕರ್ ಮಾತನಾಡಿ, ಜನ ಸಾಮಾನ್ಯರ ಜೀವನವನ್ನು ಸರಳ ಮತ್ತು ಆನಂದದಾಯಕವಾಗಿ ಇರಬೇಕೆಂದರೆ ಎಂಜಿನಿಯರುಗಳ ಶ್ರಮ ಪ್ರಮುಖವಾಗುತ್ತದೆ. ಸಾಧನೆ ಮಾಡಲು ಹೊರಡುವವರು ಸದಾ ಎಲ್ಲರಿಗಿಂತ ಒಂದು ಹೆಜ್ಜೆ ಮುಂದೆಯೇ ಇರಬೇಕು. ಇಲ್ಲದಿದ್ದರೆ ಬೇರೆಯವರು ನಿಮಗಿಂತಲೂ ಮೊದಲೇ ಅವಕಾಶವನ್ನು ಕಬಳಿಸುವ ಸಾಧ್ಯತೆಗಳು ಹೆಚ್ಚಾಗಿರುತ್ತವೆ ಎಂದರು.

ಕಾಲೇಜು ನಿರ್ದೇಶಕ ಪ್ರೊ.ವೈ. ವೃಷಬೇಂದ್ರಪ್ಪ, ಪ್ರಿನ್ಸಿಪಾಲ್ ಡಾ.ಎಚ್.ಬಿ. ಅರವಿಂದ, ಪರೀಕ್ಷಾಂಗ ವಿಭಾಗದ ಡೀನ್ ಡಾ.ಎಸ್.ಕುಮಾರಪ್ಪ, ನಾನಾ ವಿಭಾಗದ ಮುಖ್ಯಸ್ಥರಾದ ಡಾ.ಸಿ.ಎಂ.ಕಲ್ಲೇಶಪ್ಪ, ಡಾ.ಎಸ್. ಸುರೇಶ್, ಡಾ.ಸಿ.ಆರ್. ನಿರ್ಮಲಾ, ಡಾ. ಮಾನವೇಂದ್ರ, ಡಾ.ಬಿ. ಪೂರ್ಣಿಮಾ, ಡಾ.ಜಿ.ಎಸ್. ಸುನೀತಾ, ಡಾ. ದೇವೇಂದ್ರಪ್ಪ ಇತರರಿದ್ದರು.

## ರ್‍ಯಾಂಕ್ ವಿಜೇತರಿಗೆ ಪದವಿ

**2021-22ನೇ ಸಾಲಿನಲ್ಲಿ ಬಿಐಇಟಿ ಕಾಲೇಜಿನ ಎಂಜಿನಿಯರಿಂಗ್ ಮತ್ತು ಸ್ನಾತಕೋತ್ತರ ಸೇರಿ 18 ವಿಭಾಗಗಳಿಂದ ಒಟ್ಟು 778 ವಿದ್ಯಾರ್ಥಿಗಳು ಪದವಿ ಹಾಗೂ 202 ವಿದ್ಯಾರ್ಥಿಗಳು ಸ್ನಾತಕೋತ್ತರ ಪದವಿ ಪೂರ್ಣಗೊಳಿಸಿದ್ದಾರೆ. ಸಮಾರಂಭದಲ್ಲಿ 16 ರ್‍ಯಾಂಕ್ ವಿಜೇತರಿಗೆ ಪದವಿ, ಪದಕ ಹಾಗೂ 13 ಮಂದಿಗೆ ಪಿಎಚ್‌ಡಿ ಪ್ರದಾನ ಮಾಡಲಾಯಿತು.**